## ವಿವರಣೆ: ಡಾ. ದೇವರಕೊಂಡಾರೆಡ್ಡಿ

**ಊರಳಿವು**

ರಾಜ್ಯದಲ್ಲಿ ರಾಜನೊಬ್ಬನಿದ್ದರೂ ಗ್ರಾಮಗಳ ಮಟ್ಟದಲ್ಲಿ ಕ್ಷುಲ್ಲಕ ಕಾರಣಗಳಿಗೆ ಜಗಳಗಳಾಗುತ್ತಿದ್ದವು. ಕೆಲವೊಮ್ಮೆ ವೈರಿಸೈನ್ಯ ತನ್ನದಲ್ಲದ ರಾಜ್ಯದ ಮೇಲೆ ಯುದ್ಧಕ್ಕೆ ಹೋಗುವಾಗ ದಾರಿಯಲ್ಲಿ ಸಿಕ್ಕ ಗ್ರಾಮಗಳನ್ನು ಲೂಟಿ ಮಾಡುವುದು, ದನ–ಕರುಗಳನ್ನು ಅಪಹರಿಸುವ ಕೆಲಸ ಮಾಡುತ್ತಿದ್ದರು. ಆಗ ಅದನ್ನು ಊರಿನ ಕೆಲವು ಧೀರರು ವಿರೋಧಿಸಿ ಗ್ರಾಮದ ಮೇಲೆ ಧಾಳಿ ಮಾಡಿದವರ ಮೇಲೆ ಯುದ್ಧ ಮಾಡುತ್ತಿದ್ದರು. ಈ ಯುದ್ಧದಲ್ಲಿ ಸತ್ತವನು ವೀರನಾಗುತ್ತಿದ್ದ. ಈ ಪ್ರಕ್ರಿಯೆಯನ್ನು ಶಾಸನಗಳಲ್ಲಿ 'ಊರಳಿವು' ಎಂದು ಕರೆದಿವೆ.

ವೀರಗಲ್ಲುಗಳ ಪಾಠದಲ್ಲಿ ಈ ಬಗ್ಗೆ ವಿವರಣೆ ಬಂದರೂ ವೀರಗಲ್ಲು ಶಿಲ್ಪಗಳಲ್ಲಿ ವಿಶೇಷವೇನೂ ಕಾಣುವುದಿಲ್ಲ. ವೀರನು ವೈರಿಯೊಂದಿಗೆ ಹೋರಾಡುತ್ತಿರುವಂತೆ ಬಿಡಲಾಗಿದೆ.

**ಗಡಿಕಾಳಗ**

ಗಡಿ ಎಂದಾಗ ದೇಶದ ಗಡಿಯಾಗಬಹುದು ಇಲ್ಲವೇ ಊರಿನ ಗಡಿಯೂ ಆಗಿದ್ದಿರಬಹುದು. ಇದರ ಸಂಬಂಧ ನಡೆದ ಗಲಭೆಗಳಲ್ಲಿ ಸತ್ತ ವೀರರ ಕಲ್ಲುಗಳಲ್ಲಿ ಸೀಮಾಸಂಬಂಧ, ಗಡಿಕಾಳಗ ಎಂಬ ಉಲ್ಲೇಖಗಳು ದೊರೆಯುತ್ತವೆ. ಈ ಬಗೆಯ ವಿವರ ನೀಡುವ ಶಿಲ್ಪಗಳಲ್ಲಿ ಗಡಿಗಳನ್ನು ಗುರುತಿಸುವ ಚಿಹ್ನೆಗಳಿರುವುದಿಲ್ಲ. ಊರಳಿವಿನ ಶಾಸನಶಿಲ್ಪಗಳಂತೆಯೇ ಇರುತ್ತವೆ. ಶಾಸನದ ಪಾಠದಿಂದ ಅಲ್ಲಿ ನಡೆದಿರುವ ಜಗಳದ ವಿವರಗಳನ್ನು ತಿಳಿಯಬಹುದು.

**ಗೋಗ್ರಹಣ, ತುರುಗಾಳೆಗ, ಹಸುಗಳನ್ನು ಕದಿಯುವುದು**

ಹಿಂದಿನ ಕಾಲದಲ್ಲಿ ಗೋವು ಮಾನವನ ಸಂಪತ್ತಿನ ಭಾಗವಾಗಿ ಪರಿಗಣಿತವಾಗಿತ್ತು. ಹೀಗಾಗಿ ಇದನ್ನು ಸಾಕುವುದು ರಕ್ಷಿಸಿಕೊಳ್ಳುವುದು ಒಂದು ಪ್ರತಿಷ್ಠೆ ಹಾಗೂ ಸವಾಲಿನ ಕೆಲಸವಾಗಿತ್ತು. ಮಹಾಭಾರತದ ವಿರಾಟಪರ್ವದಲ್ಲಿ ವಿರಾಟನನ್ನು ಯುದ್ಧಕ್ಕೆ ಆಹ್ವಾನಿಸಲು ದುರ್ಯೋಧನನು ಹೂಡಿದ ತಂತ್ರವೆಂದರೆ ವಿರಾಟನ ಗೋವುಗಳನ್ನು ಅಪಹರಿಸಿ ಸವಾಲು ಹಾಕಿದ್ದು. ಇಂತಹದೇ ಪ್ರಸಂಗಗಳು ಕರ್ನಾಟಕದ ತುರುಗೋಳ್ ಶಾಸನಗಳಲ್ಲಿ ಉಲ್ಲೇಖವಾಗಿವೆ. ಪಕ್ಕದ ಗ್ರಾಮದವರು ಅಥವಾ ವೈರಿಸೈನ್ಯ ಊರಿಗೆ ಧಾಳಿ ಮಾಡಿದಾಗ ಗ್ರಾಮದಲ್ಲಿದ್ದ ಪಶುಗಳನ್ನು ಅಪಹರಿಸುತ್ತಿದ್ದರು. ಪಶುಗಳಲ್ಲಿ ಹಸು–ಕರು, ಎಮ್ಮೆ–ಕರುಗಳೂ ಸೇರಿದ್ದವು. ಇಂತಹ ಪರಿಸ್ಥಿತಿಯಲ್ಲಿ ಅವುಗಳನ್ನು ಬಿಡಿಸಿಕೊಂಡು ಬರುವುದು ಊರವರ ಕರ್ತವ್ಯವಾಗಿತ್ತು. ಅಂತಹ ಅನೇಕ ಸಂದರ್ಭಗಳಲ್ಲಿ ಗ್ರಾಮದವರು ಸಾಯುತ್ತಿದ್ದರು. ಇಂತಹ ಕಾರ್ಯದಲ್ಲಿ ತೊಡಗಿ ತಮ್ಮ ಪ್ರಾಣಾರ್ಪಣೆ ಮಾಡಿದ ವೀರರನ್ನು ಶಾಸನಗಳು ಬಹುವಾಗಿ ಕೊಂಡಾಡಿವೆ. ಒಬ್ಬ ವೀರ ಪಶುಗಳನ್ನು ಮರಳಿಸಿ ವೀರಮರಣ ಹೊಂದಿದರೆ, ಇನ್ನೊಬ್ಬ ವೀರನ ಹೆಣವನ್ನು ತುಳಿದುಕೊಂಡು ಪಶುಗಳು ಗ್ರಾಮಕ್ಕೆ ಮರಳಿದುವಂತೆ. ಇಂತಹ ಸಂಗತಿ ಹೇಳುವ ಅನೇಕ ನೂರು ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಪ್ರದೇಶದಿಂದ ಪ್ರದೇಶಕ್ಕೆ ಈ ವಿವರ ನೀಡುವ ಶಾಸನಶಿಲ್ಪಗಳೂ ವಿಧವಿಧವಾಗಿವೆ.

ಗೋಗ್ರಹಣ ಅಥವಾ ತುರುಗೋಳ್ ಎಂದು ಸೂಚಿಸುವ ವೀರಗಲ್ಲು ಶಿಲ್ಪದಲ್ಲಿ ಸಾಮಾನ್ಯವಾಗಿ ಮೂರು ಹಂತಗಳಿದ್ದು ಕೆಳಗಿನ ಹಂತ ಪ್ರಮುಖವಾಗಿರುತ್ತದೆ. ಈ ಹಂತದಲ್ಲಿ ವೀರನು ಶತ್ರುಗಳೊಡನೆ ಹೋರಾಡುವ ಶಿಲ್ಪವಿರುತ್ತದೆ. ವೀರನ ಹಿಂದೆ ಗೋವುಗಳು ತಲೆ ಎತ್ತಿ ನಿಂತಿರುವಂತೆ ಶಿಲ್ಪ ಬಿಡಿಸಿರುತ್ತಾನೆ. ಕೆಲವೊಮ್ಮೆ ವೀರನ ಕಡೆಗೆ ಹಸುಗಳು ಬೆನ್ನು ಮಾಡಿ ನಿಂತಿರುವಂತೆ / ಓಡಲು ಸಿದ್ಧವಾಗಿರುವಂತೆ ಬಿಡಿಸಿರುತ್ತಾರೆ. ಕೆಲವಡೆ ಓಡುತ್ತಿರುವಂತೆ ಶಿಲ್ಪಿಸಲಾಗಿದೆ. ಶಾಸನವಿರಲಿ ಶಾಸನವಿಲ್ಲದಿರಲಿ ವೀರಗಲ್ಲಿನ

ಶಿಲ್ಪವನ್ನು ನೋಡಿಯೇ ತೀರ್ಮಾನಿಸಬಹುದು. ಕರ್ನಾಟಕದಲ್ಲಿ ದೊರೆತಿರುವಷ್ಟು ಗೋಗ್ರಹಣದ ವೀರಗಲ್ಲುಗಳು ಬಹುಶಃ ಮತ್ತೆಲ್ಲಿಯೂ ದೊರೆತಿಲ್ಲ. ಇವು ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ವಿಶಿಷ್ಟವಾಗಿ ದೊರೆಯುವ ಗೋಗ್ರಹಣದ ಶಿಲ್ಪದ ಕಲ್ಲುಗಳಾಗಿವೆ.

**ಹೆಂಗಸರ ಮಾನಾಪಹರಣ / ಪೆಂಡಿರುಡೆಯುರ್ಚು**

ಗೋಗ್ರಹಣದ ವೀರಗಲ್ಲುಗಳಂತೆ ಹೆಂಗಸರ ಮಾನಾಪರಣದ ಶಾಸನಶಿಲ್ಪಗಳೂ ಕರ್ನಾಟಕದಲ್ಲಿ ದೊರೆತಿವೆ. ಗ್ರಾಮಕ್ಕೆ ದುಷ್ಟರು ಧಾಳಿ ಮಾಡಿದಾಗ, ವೈರಿಪಡೆ ಧಾಳಿ ಮಾಡಿದಾಗ, ಇನ್ನೊಂದು ಗ್ರಾಮದವರು ಈ ಗ್ರಾಮದವರಿಗೆ ಸವಾಲೆಸೆಯಲು ತುರುಗೋಳು (ಗೋಗ್ರಹಣ) ಮಾಡುವುದರೊಂದಿಗೆ ಹೆಂಗಸರ ಮಾನಾಪಹರಣವನ್ನು ಕೆಲವು ಸಂದರ್ಭಗಳಲ್ಲಿ ಮಾಡುತ್ತಿದ್ದರು.

ಇಂತಹ ಸಂದರ್ಭಗಳಲ್ಲಿ ಗ್ರಾಮದವರೆಲ್ಲಾ ಒಂದಾಗಿ ವೈರಿಗಳನ್ನು ಹಿಮ್ಮೆಟ್ಟಿಸುತ್ತಿದ್ದರು. ಇಂತಹ ಕಾದಾಟವನ್ನು ಉಲ್ಲೇಖಿಸಿರುವ ಕಲ್ಲುಗಳನ್ನು 'ಪೆಂಡಿರುಡೆಯುರ್ಚು ಕಲ್ಲು'ಗಳೆಂದು ಶಾಸನದಲ್ಲಿ ಕರೆಯಲಾಗಿದೆ.

ಈ ಬಗೆಯ ವಿವರ ನೀಡುವ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಕೆಳಗಿನ ಹಂತದಲ್ಲಿ ಈ ಬಗೆಯ ದೃಶ್ಯಗಳಿರುತ್ತವೆ. ಯುದ್ಧ ಮಾಡುತ್ತಿರುವ ವೀರನ ಶಿಲ್ಪದ ಹಿಂಬದಿಯಲ್ಲಿ ಗೋವುಗಳ ಜೊತೆಗೆ ನಗ್ನಸ್ತ್ರೀಯರ ಶಿಲ್ಪಗಳನ್ನೂ ಬಿಡಿಸಿರುತ್ತಾರೆ. ಕೆಲವು ಕಲ್ಲುಗಳಲ್ಲಿ ಕೇವಲ ನಗ್ನಸ್ತ್ರೀಯರು ಮಕ್ಕಳನ್ನು ಎತ್ತಿಕೊಂಡಿರುವಂತೆ ಬಿಡಿಸಿರುತ್ತಾರೆ. ಕರ್ನಾಟಕದ ಅಬ್ಬಲೂರು ಮೊದಲಾದೆಡೆ ಇಂತಹ ಶಾಸನಶಿಲ್ಪಗಳು ದೊರೆತಿವೆ.

**ಬೇಟೆ**

ಪ್ರಾಚೀನ ಭಾರತದಲ್ಲಿ / ಕರ್ನಾಟಕದಲ್ಲಿ ಕಾಡುಪ್ರಾಣಿ ಬೇಟೆಗೆ ವಿಶಿಷ್ಟ ಸ್ಥಾನ. ಅನೇಕ ವೇಳೆ ಹಬ್ಬಹರಿದಿನಗಳಲ್ಲಿ ಗ್ರಾಮಸ್ಥರು ಒಟ್ಟಾಗಿ ಬೇಟೆಯಾಡುತ್ತಿದ್ದರು. ಭಾರತದ ಕಾವ್ಯಗಳಲ್ಲಿ ಬೇಟೆಯ ವರ್ಣನೆ ಕಾವ್ಯದ ಅಥವಾ ಕಾವ್ಯನಾಯಕನ ಜೀವನದ ಒಂದು ಭಾಗವಾಗಿ ಬಂದಿರುತ್ತದೆ. ಸಂಕ್ರಾಂತಿ, ಯುಗಾದಿ, ದೀಪಾವಳಿಯ ನಿರ್ದಿಷ್ಟ ದಿನಗಳಲ್ಲಿ ದೇವರಪೂಜೆ ಮಾಡಿ ಬೇಟೆಗೆ ಹೊರಡುವುದು ಒಂದು ಪ್ರಮುಖ ಪದ್ಧತಿ.

ಇದು ಒಂದು ಮುಖವಾದರೆ ಇನ್ನೊಂದು ಮುಖ, ಊರಿಗೆ ಉಪಟಳ ನೀಡುತ್ತಿದ್ದ ಕ್ರೂರಪ್ರಾಣಿ ಹುಲಿ, ಚಿರತೆ, ಕರಡಿಗಳ ಬೇಟೆ. ಬೆಳೆ ನಾಶ ಮಾಡುತ್ತಿದ್ದ ಹಂದಿ, ಜಿಂಕೆ, ಮೊಲ, ಆನೆಗಳ ಬೇಟೆಯಾಡುವುದು. ಇದಕ್ಕೆ ಊರೊಟ್ಟಿನ ಒಪ್ಪಿಗೆ ಪಡೆದು ಬೇಟೆಯಾಡುತ್ತಿದ್ದರು. ವರ್ಷಕ್ಕೊಮ್ಮೆ ಕಾಡುಪ್ರಾಣಿಗಳ ಉಪಟಳವನ್ನು ತಡೆಯದಿದ್ದರೆ ಅವುಗಳ ಸಂತತಿ ಹೆಚ್ಚಾಗಿ ಕೃತಕ ಕ್ಷಾಮ ನಿರ್ಮಾಣವಾಗುತ್ತಿತ್ತು. ಅನೇಕ ವೇಳೆ ಕಾಡು ಅಂಚಿನ ಗ್ರಾಮಗಳವರು ರಾಜನಿಗೆ ದೂರು ಸಲ್ಲಿಸಿ ಬೇಟೆಯಾಡಲು ಆಹ್ವಾನಿಸುತ್ತಿದ್ದರು.

ಹೀಗೆ ಬೇಟೆಗೆ ಹೋದಾಗ ಕೆಲವೊಮ್ಮೆ ಕಾಡುಪ್ರಾಣಿಗಳ ಧಾಳಿಗೆ ಸಿಕ್ಕಿ ಪ್ರಾಣ ಕಳೆದುಕೊಳ್ಳುತ್ತಿದ್ದರು. ಇಂತಹವರ ಸ್ಮರಣಾರ್ಥ ಹಾಕಿಸಿರುವ ಕಲ್ಲುಗಳೇ ಬೇಟೆಯ ವೀರಗಲ್ಲುಗಳು.

ಬೇಟೆಯ ವೀರಗಲ್ಲುಗಳಲ್ಲಿ ಹೆಚ್ಚಾಗಿ ದೊರೆಯುವುದು ಹಂದಿಬೇಟೆ ವೀರಗಲ್ಲುಗಳು. ಮಾನವ ತನ್ನ ಆಹಾರವನ್ನು ಕಂಡುಕೊಂಡಿದ್ದೇ ಬೇಟೆ ಮೂಲಕ. ಬೇಟೆ ಮೊದಲು, ವ್ಯವಸಾಯ ನಂತರದ್ದು, ಹಂದಿ ರೈತನ ಬೆಳೆ ನಾಶಕ. ಹೀಗಾಗಿ ಇವುಗಳ ಬೇಟೆ ಒಂದು ಖುಷಿ ಕೊಡುವ ವಿಷಯವಾಗಿತ್ತು. ಅನೇಕ ಶಾಸನಗಳು ಈ ಬಗ್ಗೆ ವಿವರಗಳನ್ನು ನೀಡುತ್ತದೆ. ಹಂದಿಗಳಲ್ಲಿ ಪಿರಿಯಪಂದಿಯೂ ಒಂದು. ಇದನ್ನು ಸಾಮಾನ್ಯರು ಇಂದಿಗೂ

‘ಸಲಗ’ (ಗಂಡುಹಂದಿ) ಎಂದೇ ಗುರುತಿಸುತ್ತಾರೆ. ಬ್ರಿಟಿಷ್ ಮ್ಯೂಸಿಯಂ ಪ್ಲೇಟ್ಸ್‌ನಲ್ಲಿ (ಕ್ರಿ.ಶ. ಸು.800) ರಾಷ್ಟ್ರಕೂಟ ರಾಜ ‘ಮೆಪ್ಪಿಕ್ಕಿ ಪೊರೆದ’ ಪಂದಿಗಳ ಬೇಟೆಯಾಡಿದ ಘಟನೆಯ ಬಗ್ಗೆ ವಿವರಗಳಿವೆ. ‘ಮೆಪ್ಪಿಕ್ಕಿ ಪೊರೆದ’ ಎಂದರೆ ‘ಚೆನ್ನಾಗಿ ಕೊಬ್ಬಿ ಮಿರಮಿರನೆ ಮಿಂಚುತ್ತಿದ್ದ’ ಎಂಬ ಅರ್ಥ ಬರುತ್ತದೆ. ಆತಕೂರು ಶಾಸನದಲ್ಲಿಯೂ (ಕ್ರಿ.ಶ. ಸು.948) ಮಣಲರ ಎಂಬುವವನು ತನ್ನ ಪ್ರೀತಿಯ ನಾಯಿ ‘ಕಾಳಿ’ಯನ್ನು ಪಿರಿಯ ಪಂದಿಯ ಮೇಲೆ ಬಿಟ್ಟನಂತೆ. ಹೀಗೆ ಹಂದಿ ಬೇಟೆಯಾಡುವಾಗ ಅವುಗಳ ಧಾಳಿಗೆ ಸಿಕ್ಕಿ ಸತ್ತವರನ್ನು ವೀರರೆಂದೇ ಜನ ಪರಿಗಣಿಸುತ್ತಿದ್ದರು.

ಹಂದಿಯ/ಪ್ರಾಣಿಗಳ ಬೇಟೆಯಲ್ಲಿ ನಾಯಿಗಳದ್ದೇ ಪ್ರಧಾನ ಪಾತ್ರ. ನಾಯಿಗಳು ತಾವು ಕಂಡ ಬೇಟೆಯನ್ನು ಅಡ್ಡಗಟ್ಟಿ ತನ್ನ ಒಡೆಯನೊಂದಿಗೆ ಹೋರಾಟಕ್ಕೆ ಇಳಿಯುತ್ತಿದ್ದವು. ಇವೂ ಕೂಡ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದವು. ಇಂತಹವುಗಳ ನೆನಪಿನಲ್ಲೂ ನಾಯಿಯ ಯಜಮಾನ ಶಾಸನವನ್ನು ಹಾಕಿಸಿರುತ್ತಾನೆ. ಅಂತಹ ಅನೇಕ ನಾಯಿಯ ನೆನಪಿನ ಶಾಸನಗಳೂ ಇವೆ. ಅಪರೂಪದ ಕೆಲವು ಶಾಸನಗಳಲ್ಲಿ ನಾಯಿಗಳು ಹಂದಿಯ ಬೇಟೆಯಲ್ಲಿ ಪಡೆದ ಪ್ರಧಾನಸ್ಥಾನವನ್ನು ಉಲ್ಲೇಖಿಸುತ್ತವೆ. ಮೇಲಾಗಾಣಿ (ಕೋಲಾರ ಜಿಲ್ಲೆ)ಯ ಎರಡು ಶಾಸನಗಳಲ್ಲಿ ‘ಲೋಗ’ ಎಂಬ ನಾಯಿ ಸುಮಾರು 70 ಹಂದಿಗಳನ್ನು ಹಿಡಿದಿತ್ತಂತೆ. ‘ದಳಗ’ ಎಂಬುವ ನಾಯಿಯೂ ಅಷ್ಟೇ ಪ್ರಮಾಣದ ಹಂದಿಗಳನ್ನು ಹಿಡಿದಿತ್ತಂತೆ (ಚಿತ್ರ).

ಹುಲಿಬೇಟೆ ಇದಕ್ಕೆ ಭಿನ್ನವಾದದ್ದು. ಹಂದಿಯನ್ನು ಎದುರಿಸಿದಷ್ಟು ಸುಲಭವೂ ಅಲ್ಲ. ಸಾಧ್ಯವೂ ಅಲ್ಲ. ಏಕೆಂದರೆ ಅದರ ವಾಸಸ್ಥಳವನ್ನು ಗುರುತಿಸುವುದೇ ಕಷ್ಟದ ಕೆಲಸ. ಅನಂತರ ಅದನ್ನು ಬೇಟೆಯಾಡುವುದು. ತಂತ್ರ ಹಾಗೂ ಶಕ್ತಿಗಳೆರಡೂ ಬೇಕಾಗಿತ್ತು. ಇಂತಹ ಹುಲಿಬೇಟೆಯ ವೀರಗಲ್ಲುಗಳು ಕರ್ನಾಟಕದಾದ್ಯಂತ ಅನೇಕವು ದೊರೆತಿವೆ. ಬಾಗಳಿಯ ಶಾಸನವೊಂದರಲ್ಲಿ ಮರದ ಮೇಲೆ ಮರೆಯಲ್ಲಿ ಕುಳಿತು ಹುಲಿಯ ಮೇಲೆ ಬಾಣ ಬಿಡುತ್ತಿರುವ ಶಿಲ್ಪವಿದೆ. (ಬೇರೆ ಬೇರೆ ಚಿತ್ರ ವಿಕ್ರಮಾದಿತ್ಯನ ಶಾಸನ)

**ಆನೆ ಬೇಟೆ**

ಕಾಡಿನಲ್ಲಿರಬೇಕಾದ ಆನೆಗಳು ನಾಡಿಗೆ ಬಂದು ಉಪಟಳ ನೀಡಿದಾಗ ಅವುಗಳನ್ನು ಸಾಕಿದ ಆನೆಗಳ ಸಹಾಯದಿಂದ ಹಿಡಿದು ಪಳಗಿಸುವುದು ಪದ್ಧತಿ. ಕೆಲವೊಮ್ಮೆ ಸೈನ್ಯಕ್ಕೆ ಆನೆಗಳ ಅವಶ್ಯಕತೆಯಿದ್ದಾಗ ಖೆಡ್ಡದಂತಹ ಕಾರ್ಯಕ್ರಮವನ್ನು ಹಾಕಿಕೊಂಡು ಆನೆ ಸೆರೆ ಹಿಡಿಯುತ್ತಿದ್ದರು. ಕೊಡಗಿನ ಅರಸನೊಬ್ಬ ಕೊಡಗಿನಲ್ಲಿ ಆನೆಗಳ ಕಾಟ ಹೆಚ್ಚಾದಾಗ ಬಂದೂಕಿನಿಂದ ಒಂದು ಕಡೆ 150 ಆನೆಗಳನ್ನು ಇನ್ನೊಂದು ಕಡೆ 250 ಆನೆಗಳನ್ನು ಕೊಂದನಂತೆ. ಅದರ ಪಾಪ ಪರಿಹಾರಕ್ಕೆ ಕೊಡಗಿನ ದೇವಾಲಯಕ್ಕೆ ಬೆಳ್ಳಿ ಆನೆ ಮಾಡಿಸಿ, ತನ್ನ ಸಾಹಸವನ್ನು ಅದರ ಮೇಲೆ ಶಾಸನ ಕೊರೆಯಿಸಿ ದಾನ ನೀಡಿದ್ದಾನೆ.

ಖೆಡ್ಡದ ಬಗ್ಗೆ ಒಂದೇ ಒಂದು ಶಿಲ್ಪ ದೊರೆತಿದ್ದು ಅದು ಗುಂಡ್ಲುಪೇಟೆ ತಾಲೂಕಿನಲ್ಲಿದೆ (ಚಿತ್ರ).

ಇವಲ್ಲದೆ ಕರಡಿ, ಜಿಂಕೆ, ಮೊಸಳೆ ಮೊದಲಾದ ಪ್ರಾಣಿಗಳ ಕೈಗೆ ಸಿಕ್ಕಿ ಸತ್ತ ಮನುಷ್ಯರ ನೆನಪಿನ ಕಲ್ಲುಗಳೂ ಇವೆ.

**ಕೀಳ್ಗುಂಟೆ**

ಈ ಶಬ್ದದ ಅರ್ಥ ಸ್ಪಷ್ಟನೆಯಿಲ್ಲ. ಆದರೆ ಈ ಬಗೆಯ ಮರಣವನ್ನು ಹೇಳುವ ಶಾಸನಶಿಲ್ಪಗಳಲ್ಲಿ ಎರಡು ಬಗೆಯವು ದೊರೆಯುತ್ತವೆ. ವೀರನೊಬ್ಬ ಸತ್ತ ರಾಜನ/ಸ್ವಾಮಿಯ ದೇಹದೊಂದಿಗೆ ಜೀವಂತವಾಗಿ ಮಣ್ಣಾಗುವುದು. ಇನ್ನೊಂದರಲ್ಲಿ ರಾಜ/ಒಡೆಯನೊಂದಿಗೆ ಬೆಂಕಿಯಲ್ಲಿ ಒಂದಾಗಿ ಮಲಗುವುದು

(ಹೇಮಾವತಿ ಶಾಸನ, ಬೆಂ.ಮ್ಯೂಸಿಯಂ  ಶಾಸನ). ಬರವಣಿಗೆಯುಳ್ಳ ಶಾಸನಗಳು ಅನೇಕವು ದೊರೆತರೂ ಶಿಲ್ಪಗಳುಳ್ಳವುಗಳು ಕರ್ನಾಟಕದಲ್ಲಿ ಕೆಲವೇ ದೊರೆತಿವೆ.

**ಸಿಡಿತಲೆ**

ತನ್ನನ್ನು ಆಳುವ ರಾಜನಿಗೆ ಅಥವಾ ತನ್ನ ಕುಟುಂಬದಲ್ಲಿ ಏನಾದರೂ ತೊಂದರೆಯಾದಲ್ಲಿ ಊರಿನ ದೇವರಿಗೆ ಸಿಡಿತಲೆ ಕೊಡುವುದಾಗಿ ಅವನ ನಂಬಿಕಸ್ತ ಸೇವಕರು ಹರಕೆ ಮಾಡಿಕೊಳ್ಳುತ್ತಿದ್ದರು. ತೊಂದರೆ ನಿವಾರಣೆಯಾದಾಗ ತಮ್ಮ ಹರಕೆಯಂತೆ ಸಿಡಿತಲೆ ನೀಡುತ್ತಿದ್ದರು. ಇಂತಹ ಅನೇಕ ಶಿಲ್ಪಗಳು. ಕರ್ನಾಟಕದಾದ್ಯಂತ ದೊರೆತಿವೆ.

ಸಿಡಿತಲೆ ಎಂಬುದು ಅದರ ಅರ್ಥವೇ ಹೇಳುವಂತೆ ತಲೆಯನ್ನು ದೇಹದಿಂದ ಬೇರೆ ಮಾಡಿ ಸಿಡಿಯುವಂತೆ ಮಾಡುವುದು. ಇದರ ರೀತಿ ಹೀಗಿದೆ. ಸಿಡಿತಲೆಯಾಗುವ ವ್ಯಕ್ತಿಯನ್ನು ಮೆರವಣಿಗೆಯಲ್ಲಿ ಸಿಡಿಯಾಗುವ ಸ್ಥಳಕ್ಕೆ ಕರೆತರುತ್ತಾರೆ. ನಂತರ ಪದ್ಮಾಸನದಲ್ಲಿ ಕೈಮುಗಿದು ಧ್ಯಾನಸ್ಥನಾಗಿ ಕುಳಿತ ವ್ಯಕ್ತಿಯ ತಲೆಯ ಜುಟ್ಟನ್ನು ಪಕ್ಕದಲ್ಲಿ ನೆಲಕ್ಕೆ ಹೂಳಿದ ಬಿದಿರಿನ 'ಗಳ'ದ ತುದಿಯನ್ನು ಬಾಗಿಸಿ ಕಟ್ಟುತ್ತಾರೆ. ನಂತರ ರಣವಾದ್ಯಗಳ ಮೇಳದಲ್ಲಿ ಬೇರೆಯವನೊಬ್ಬ ಹರಿತವಾದ ಕತ್ತಿ ಅಥವಾ ಆಯುಧದಿಂದ ತಲೆಯನ್ನು ಕಡಿದಾಗ ತಲೆ ಚಂಗನೆ ಸಿಡಿಯುತ್ತದೆ. ಇದೇ ಸಿಡಿತಲೆ. ಇಲ್ಲಿ ಅಪರೂಪಕ್ಕೆ ಹೆಂಗಸರ ಸಿಡಿತಲೆ ಕಲ್ಲೂ ದೊರೆತಿರುವುದು ಹೆಂಗಸರೂ ಸಿಡಿತಲೆ ಹೋಗುತ್ತಿದ್ದರೆಂಬುದನ್ನು ಸೂಚಿಸುತ್ತದೆ. (ಚಿತ್ರ. ಅಬ್ಬಲೂರು ...)

**ಧಾರ್ಮಿಕ ಆತ್ಮಬಲಿ (Religious sacrifice)**

**ನಿಸಿಧಿ**

ಜೈನಧರ್ಮದಲ್ಲಿ ದೇಹವನ್ನು ಸುಡಿಸಿಕೊಳ್ಳುವುದಾಗಲೀ ಕತ್ತರಿಸಿ ಕೊಳ್ಳುವುದಾಗಲೀ, ಹಿಂಸಾತ್ಮಕ ರೀತಿಯಿಂದ ಸಾವನ್ನಪ್ಪುವುದು ನಿಷಿದ್ಧ. ಹಾಗೆಂದು ಯುದ್ಧಭೂಮಿಯಲ್ಲಿ ಅನೇಕ ಜೈನವೀರರು ಹೋರಾಡಿ ಸಾವನ್ನಪ್ಪಿದ್ದಾರೆ. ಅಂತಹ ಸಮಯಲ್ಲಿ ದಂಡನಾಯಕನ / ಸೈನಿಕನ / ರಾಜನ ಪತ್ನಿಯರು ಪತಿಯನ್ನು ಅನುಸರಿಸಬೇಕಾದಲ್ಲಿ ಧಾರ್ಮಿಕ ವಿಧಿವಿಧಾನದಿಂದ ದೇಹವನ್ನು ತೊರೆಯಬಹುದಿತ್ತು. ಜೈನ ಈ ಧಾರ್ಮಿಕ ವಿಧಿಯನ್ನು 'ನಿಸಿಧಿ' ಎಂದು ಕರೆಯುತ್ತಾರೆ. ಕರ್ನಾಟದ ಅಥವಾ ಭಾರತದ ಜೈನಧರ್ಮದ ಇತಿಹಾಸದಲ್ಲಿ ಹೀಗೆ ನಿಸಿಧಿಯಾದ ಅನೇಕ ರಾಜಮಹಾರಾಜರ, ಅವರ ಪತ್ನಿಯರ, ಸಾಮಾನ್ಯ ಜನರ ವಿವರ ನೂರಾರು ಸಂಖ್ಯೆಯಲ್ಲಿ ದೊರೆಯುತ್ತದೆ.

ಕರ್ನಾಟಕದಲ್ಲಿ ಆರಂಭದ ನಿಸಿಧಿ ಶಾಸನಗಳು ಹುಟ್ಟುಬಂಡೆಗಳ ಮೇಲೆ ಬರೆದವಾಗಿದ್ದು, 10–11ನೆಯ ಶತಮಾನದ ನಂತರ ಪ್ರತ್ಯೇಕ ಕಲ್ಲುಗಳ (ಚಪ್ಪಡಿಗಳ) ಮೇಲೆ ವೀರಗಲ್ಲುಗಳಂತೆ ಕೆತ್ತಲಾರಂಭಿಸಿದರು. ಇವುಗಳ ರೀತಿ ಈ ಕೆಳಕಂಡ ರೀತಿಯಲ್ಲಿರುತ್ತದೆ. ಇವುಗಳಲ್ಲಿ ಶಾಸನವಿರಬಹುದು, ಶಾಸನವಿಲ್ಲದಿರಬಹುದು.

ಸಾಮಾನ್ಯವಾಗಿ ನಿಸಿಧಿ ಕಲ್ಲುಗಳು ಎರಡು ಹಂತದಲ್ಲಿರುತ್ತವೆ. ಮೊದಲ ಹಂತದಲ್ಲಿ ದೀಕ್ಷಾಗುರು ಹಾಗೂ ದೀಕ್ಷಾಶಿಷ್ಯರ ಶಿಲ್ಪಗಳನ್ನು ಬಿಡಿಸಿರುತ್ತಾರೆ. ದೀಕ್ಷಾಗುರು ಕಲ್ಲಿನ ಎಡಭಾಗದಲ್ಲಿ ಕುಳಿತು ಶಾಸ್ತ್ರಗಳನ್ನು ಬೋಧಿಸುತ್ತಿರುವಂತಿದ್ದರೆ, ಶಿಷ್ಯನ ಶಿಲ್ಪವು ಪದ್ಮಾಸನದಲ್ಲಿ ಕುಳಿತು ಕೈಮುಗಿದು ಗುರುವಿನ ಬೋಧನೆಯನ್ನು ಕೇಳುತ್ತಿರುವಂತೆ ಶಿಲ್ಪಿಸಿರುತ್ತದೆ. ಇವರಿಬ್ಬರ ಮಧ್ಯೆ ಠವಣೆ ಕೋಲು ಅದರ ಮೇಲೆ ಇರಿಸಿರುವ ಶಾಸ್ತ್ರಗ್ರಂಥದ ಕಟ್ಟನ್ನು ಬಿಡಿಸಲಾಗಿರುತ್ತದೆ. ಕೆಲವು ಶಿಲ್ಪಗಳಲ್ಲಿ ಠವಣೆ ಕೋಲಿಗೆ ಬದಲಾಗಿ ತಾಳೆಗ್ರಂಥಗಳ ಪೆಟ್ಟಿಗೆಯನ್ನೂ ಬಿಡಿಸಿರಬಹುದು. ಎರಡನೆಯ ಹಂತದಲ್ಲಿ ವ್ಯಕ್ತಿ ದೇಹ ತೊರೆದು ಜಿನನಾದಂತೆ ಪದ್ಮಾಸನಲ್ಲಿ

ಧ್ಯಾನಾಸಕ್ತನಾಗಿರುವಂತೆ ಶಿಲ್ಪಿಸಿರುತ್ತಾನೆ. ಶಿಲ್ಪಗಳ ಮಧ್ಯದ ಪಟ್ಟಿಕೆಗಳ ಮೇಲೆ ಶಾಸನ ರಚನೆ ಇರುತ್ತದೆ. ಪ್ರಾಚೀನ ನಿಸಿಧಿ ಶಿಲ್ಪಗಳಲ್ಲಿ ಕೇವಲ ಜಿನಬಿಂಬವೊಂದನ್ನು ಮಾತ್ರ ಬಿಡಿಸಿರುತ್ತದೆ.

ಕರ್ನಾಟಕದಲ್ಲಿ ಎಲ್ಲಾ ರಾಜವಂಶಗಳೂ ಜೈನಧರ್ಮಕ್ಕೆ ನೀಡಿದ ಪ್ರೋತ್ಸಾಹದಿಂದ ಸಾಕಷ್ಟು ಇಂತಹ ನಿಸಿಧಿ ಶಾಸನಗಳು ದೊರೆಯುತ್ತವೆ.

**ಗ್ರಹಣದ ದಿನ ಬಲಿ (Sacrifice on the day of eclipse)**

**ಉರಿ ಉಯ್ಯಾಲೆ**

ಸಾಮಾನ್ಯವಾಗಿ ಸೂರ್ಯಗ್ರಹಣದ ದಿನ ಕೆಲವರು ಆತ್ಮಬಲಿ ಮಾಡಿರುವುದುಂಟು ಇಂತಹ ಕಲ್ಲುಗಳನ್ನು 'ಉರಿ ಉಯ್ಯಾಲೆ ಕಲ್ಲು'ಗಳೆಂದು ವಿದ್ವಾಂಸರು ಗುರುತಿಸುತ್ತಾರೆ. ಕೆಲವಲ್ಲಿ ಮಾತ್ರ ಈ ವಿವರಗಳನ್ನು ನೀಡುವ ಶಿಲ್ಪಗಳಿರುತ್ತವೆ. ಕೆಲವಲ್ಲಿ ಕೇವಲ ವಿಷಯವನ್ನು ಮಾತ್ರ ಹೇಳಿ ಆತ್ಮಬಲಿ ನೀಡಿದ ವ್ಯಕ್ತಿ ಕೈಮುಗಿದುಕೊಂಡು ನಿಂತಿರುವಂತೆಯೂ ಅವನ ತಲೆಯ ಭಾಗದ ಕಲ್ಲಿನಲ್ಲಿ ಸೂರ್ಯನನ್ನು ಕೇತುಗ್ರಹವೂ ಹಾವಿನ ರೂಪದಲ್ಲಿ ನುಂಗುತ್ತಿರುವ ಶಿಲ್ಪವನ್ನು ಬಿಡಿಸಿರುತ್ರದೆ.

ಉರಿ ಉಯ್ಯಾಲೆ ಶಿಲ್ಪಗಳಲ್ಲಿ ಸಾಮಾನ್ಯವಾಗಿ ಉಯ್ಯಾಲೆಯನ್ನು ಬಿಡಿಸಿದ್ದು, ಅದರ ಮೇಲೆ ನಿಂತು ತೂಗುವ ವ್ಯಕ್ತಿ ಹಗ್ಗಗಳನ್ನು ಕೈಯಲ್ಲಿ ಬಿಗಿಯಾಗಿ ಹಿಡಿದುಕೊಂಡಿರುವಂತೆ, ಉಯ್ಯಾಲೆಯ ಕೆಳಭಾಗದಲ್ಲಿ ಜ್ವಾಲೆಗಳುಳ್ಳ ಬೆಂಕಿಯನ್ನು ಬಿಡಿಸಿರುವಂತೆ ಶಿಲ್ಪಿಸಿರುತ್ತಾರೆ. 20ನೆಯ ಶತಮಾನದ ಒಂದೆರಡು ಪೂರ್ಣ ಸೂರ್ಯಗ್ರಹಣಗಳು ಕರ್ನಾಟಕದಲ್ಲಿ ಗೋಚರಿಸಿದ್ದುದೂ ಈ ಬಗೆಯ ಆತ್ಮಬಲಿಗಳಿಗೆ ಪ್ರೇರಣೆ ಇದ್ದಿರಬಹುದು. ಒರಿಸ್ಸಾದಲ್ಲಿ ಕಳೆದ ಕೆಲವು ದಶಕಗಳ ಹಿಂದೆ ಉರಿಯುತ್ತಿರುವ ಬೆಂಕಿಯ ಮೇಲೆ ತಲೆಕೆಳಗಾಗಿ ಹಗ್ಗದಲ್ಲಿ ಕಟ್ಟಿದ ವ್ಯಕ್ತಿಯನ್ನು ತೂಗುತ್ತಿದ್ದ ಚಿತ್ರವೊಂದು ಪ್ರಕಟವಾಗಿತ್ತು. ಬಹುಶಃ ಇಂದಿನ ಕೊಂಡ ಹಾಯುವುದು ಇದರ ಸಂಕೇತವೇನೋ.

ಇರಲಿ, ಈ ಬಗೆಯ ಶಿಲ್ಪಗಳು ಕರ್ನಾಟಕದಲ್ಲಿ ಮಾತ್ರ ದೊರೆತಿದ್ದು ಕರ್ನಾಟಕ ಸಂಸ್ಕೃತಿಗೆ ವಿಶಿಷ್ಟ ಕೊಡುಗೆಯನ್ನು ನೀಡಿವೆ.

**ಗೂಟಗಳ ಮೇಲೆ ಬಿದ್ದು ಆತ್ಮಬಲಿಯಾಗುವುದು**

ಇಂತಹ ಕೆಲವೇ ಉದಾಹರಣೆಗಳು ಕರ್ನಾಟಕದಲ್ಲಿ ದೊರೆತಿವೆ. ಇವುಗಳ ಧಾರ್ಮಿಕವಾಗಿ ಹರಕೆ ಹೊತ್ತುಕೊಂಡ ವ್ಯಕ್ತಿ ಸಾಯುವ ಸ್ಥಳಕ್ಕೆ ಮೆರವಣಿಗೆಯಲ್ಲಿ ಸಾಗುವನು. ನಂತರ ನಿಗದಿಪಡಿಸಿದ ಎತ್ತರದ ಸ್ಥಳಕ್ಕೆ ಹತ್ತಿಸುವರು. ಈ ಎತ್ತರದ ಸ್ಥಳವನ್ನು ತಾತ್ಕಾಲಿಕವಾಗಿ ನಿರ್ಮಿಸಿರಬಹುದು ಇಲ್ಲವೇ ಮೊದಲೇ ದೇವಾಲಯದ ಎದುರಿಗಿದ್ದ ಕಲ್ಲಿನ ಕಂಬವಾಗಿರಬಹುದು. ಇಂತಹ ಎತ್ತರದ ಸ್ಥಳಕ್ಕೆ ಹತ್ತಿ ಅಲ್ಲಿಂದ ನೆಲದ ಮೇಲೆ ಲಂಬವಾಗಿ ನೆಟ್ಟಿರುವ ದಸಿಗಳ ಮೇಲೆ (ಮರದ ಚೂಪಾದ ಗೂಟಗಳ ಮೇಲೆ) ಬೀಳುತ್ತಿದ್ದ. ಆ ಗೂಟಗಳು ಇವನು ಮೇಲಿನಿಂದ ಬಿದ್ದ ರಭಸಕ್ಕೆ ಅವನ ದೇಹದೊಳಕ್ಕೆ ಪ್ರವೇಶಿಸಿ ಅವನ ಪ್ರಾಣವನ್ನು ಬಲಿ ತೆಗೆದುಕೊಳ್ಳುತ್ತಿದ್ದವು.

ಬಳ್ಳಿಗಾವೆಯ ಭೇರುಂಡೇಶ್ವರ ಕಂಬದ ಮೇಲಿನಿಂದ ಬಿದ್ದ ವೀರನೊಬ್ಬ ತಳಗಡೆಯ ಗೂಟಗಳ ಮೇಲೆ ಬಿದ್ದಿರುವಂತೆಯೂ ಅವನ ಮೈಯಿಂದ ಗೂಟಗಳು ಹೊರಕ್ಕೆ ಬಂದಿರುವಂತೆ ಶಿಲ್ಪಿ ಬಿಡಿಸಿದ್ದಾನೆ. ಇನ್ನೊಂದು ಹಾವೇರಿ ಜಿಲ್ಲೆ ಆಲದಗೇರಿಯಲ್ಲಿದೆ. ಇದರಲ್ಲಿ ವೀರನು ಇದಕ್ಕಾಗಿಯೇ ಸೃಷ್ಟಿಸಿರುವ ಮರದ ಅಟ್ಟಣಿಗೆ ಏರಿ ಅಲ್ಲಿಂದ ಬೀಳುತ್ತಿರುವಂತೆ ಬಿಡಿಸಿದೆ. ತಳಗಡೆ ಗೂಟಗಳನ್ನು ಬಿಡಿಸಲಾಗಿದೆ. ಇಲ್ಲಿ ಅಟ್ಟಣಿಗೆಯನ್ನು ಬಹುವಾಗಿ ಅಲಂಕರಿಸಿದಂತೆ ಬಿಡಿಸಲಾಗಿದೆ.

ಇವೂ ಕೂಡ ಕರ್ನಾಟಕದಲ್ಲಿ ಮಾತ್ರ ಕಂಡುಬಂದಿರುವ ಉದಾಹರಣೆಗಳು ಭಾರತದ ಬೇರೆ ಭಾಗಗಳಲ್ಲಿ ಇಂತಹ ಶಿಲ್ಪಗಳಿಲ್ಲ.

**ಶೂಲಕ್ಕೆ ಹೋಗುವುದು**

ಈ ಶಿಲ್ಪಗಳು ನಮ್ಮಲ್ಲಿ ಶಾಸನೋಕ್ತವಾಗಿಲ್ಲ. ಜನಜನಿತವಾಗಿ, ಪೌರಾಣಿಕ ಹಿನ್ನೆಲೆಯಲ್ಲಿ ಕಂಡುಬರುತ್ತವೆ. ಶೂಲಬ್ರಹ್ಮಶಿಲ್ಪಗಳು ಇಂತಹವು. ಅವು ಆಂಧ್ರದಲ್ಲಿಯೂ ಕಂಡುಬರುತ್ತದೆ.

**ಗೋಸಾಸ**

ಇವು ವಿಶಿಷ್ಟ ಬಗೆಯ ಕಲ್ಲುಗಳು ಕರ್ನಾಟಕದ ಅರೆಮಲೆನಾಡಿನ ಹಾವೇರಿ ಜಿಲ್ಲೆ, ಉತ್ತರ ಕನ್ನಡದ ಪೂರ್ವಭಾಗ, ಧಾರವಾಡ, ಬಾಗಲಕೋಟೆ, ಗದಗ, ಬಳ್ಳಾರಿಯ ಪಶ್ಚಿಮ ಭಾಗಗಳಲ್ಲಿ ಮಾತ್ರ ಕಂಡುಬರುತ್ತವೆ. ರಾಷ್ಟ್ರಕೂಟರ ಕಾಲಕ್ಕೆ ಅಂದರೆ ಕ್ರಿ.ಶ.750ರಿಂದ ಕ್ರಿ.ಶ.1000ದವರೆಗೆ ಮಾತ್ರ ರಚನೆಯಾಗಿವೆ. ರಾಷ್ಟ್ರಕೂಟರ ಪತನದೊಂದಿಗೆ ಈ ಶಿಲ್ಪಗಳ ಅವಸಾನವಾಯಿತು. ಇವನ್ನು ಏಕೆ ಮಾಡಿಸಿದರು, ಯಾವ ಅರಸು ಮನೆತನ ಈ ಪದ್ಧತಿಯಲ್ಲಿ ಅನುಸರಿಸುತ್ತಿತ್ತು. ಹೇಳುವುದು ಕಷ್ಟ. ಆದರೂ ಈ ಕಲ್ಲುಗಳು ಕರ್ನಾಟಕಕ್ಕೆ ಮಾತ್ರ ವಿಶಿಷ್ಟವಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ಗೋಸಾಸ ಕಲ್ಲುಗಳು ಎಲ್ಲಾ ಶಾಸನಕಲ್ಲುಗಳಂತಿಲ್ಲ. ಇವು ವಿಶಿಷ್ಟವಾಗಿವೆ. ದಪ್ಪನಾದ ದಿಂಡುಕಲ್ಲಿನ ಮೇಲ್ಭಾಗವನ್ನು ಅರ್ಧಚಂದ್ರಾಕಾರದಲ್ಲಿ ರಚಿಸಿ ಆ ಅರ್ಧಚಂದ್ರಾಕಾರಕ್ಕೆ ಮೂರು ಪಟ್ಟಿಕೆಗಳು (3 ಪಟ್ಟಿ) ಬರುವಂತೆ ಮಾಡಿಸುತ್ತಾರೆ. ಈ ಭಾಗ ತಳಗಡೆಯ ಚೌಕಾಕಾರದ ಪಿಂಡಿಕಲ್ಲಿನ ಮೇಲ್ಭಾಗದಲ್ಲಿ 3' ಅಥವಾ 2' ಎತ್ತರವಿರುತ್ತದೆ. ಈ ಅರ್ಧಚಂದ್ರಾಕಾರದ ಈ ಕಲ್ಲಿನ ಮೇಲೆ ಕಲಶ, ಹಂಸ, ಹಂಸ+ಆಮೆ ಕಥೆ, ಜೋಡಿ ಎತ್ತು, ನೇಗಿಲು ಮೊದಲಾದ ಶಿಲ್ಪಗಳನ್ನು ಬಿಡಿಸಿರುತ್ತಾರೆ. ಚೌಕಾಕಾರದ ಪಿಂಡಿಯ ಭಾಗದಲ್ಲಿ ಶಾಸನವಿರಬಹುದು. ಇಲ್ಲದಿರಬಹುದು. ಕೆಲವೊಮ್ಮೆ ನೇಗಿಲನ್ನು ಬಿಡಿಸಿರುತ್ತಾರೆ. ಈ ಕಲ್ಲುಗಳ ಮೇಲಿನ ಶಾಸನಗಳಲ್ಲಿ ಇವನ್ನು ಗೋಸಾಸವೆಂದು ಕರೆದಿರುತ್ತಾರೆ.

ಈ ಗೋಸಾಸಕಲ್ಲುಗಳು ಸಾಮಾನ್ಯವಾಗಿ 9, 12, 15, ಹೀಗಿದ್ದು ಮೂರು ಮೂರು ಕಲ್ಲುಗಳಂತೆ ನೆಲದಲ್ಲಿ ಒಂದು ಅಳತೆಯಲ್ಲಿ ನೆಟ್ಟಿರುತ್ತಾರೆ. ಇತ್ತೀಚೆಗೆ ಇವನ್ನು ಕಿತ್ತು ಅಲ್ಲಲ್ಲಿ ಚದುರಿಸಿರುವುದೂವುಂಟು. ದೇವಾಲಯದ ಸಮೀಪ ಇಲ್ಲವೇ ಎದುರಿನಲ್ಲಿ ನೆಟ್ಟಿರುತ್ತಾರೆ. ಗೋಸಾಸ ಎಂಬ ಪದವನ್ನು ಮುಂದಿಸಿರಿಕೊಂಡು ಕೆಲವರು ಈ ಶಬ್ದವನ್ನು ಗೋಸಹಸ್ರದಾನ ಶಬ್ದದ ಮೂಲಕ ಅರ್ಥೈಸಲು ಪ್ರಯತ್ನಿಸಿದ್ದಾರೆ. ಗೋಸಾಸ ಕಲ್ಲುಗಳ ಸಮೀಪ ಕಾಣಬರುವ ಇನ್ನೊಂದು ಬಗೆಯ ಕಲ್ಲುಗಳೆಂದರೆ ಮೇಟಿಕಲ್ಲುಗಳು. ಇವು ಗೋಸಾಸಕಲ್ಲುಗಳಂತೆ ಆಕೃತಿಯಲ್ಲಿದ್ದರೂ ಸಣ್ಣದಾಗಿ ಉದ್ದವಾಗಿರುತ್ತವೆ. ಇವು ವ್ಯವಸಾಯ ಸೂಚಕಕಲ್ಲುಗಳು. ಗ್ರಾಮದ ಸ್ಥಾಪನೆಯನ್ನು ಸೂಚಿಸುತ್ತವೆ. ಇವೂ ಕೂಡ ರಾಷ್ಟ್ರಕೂಟರ ಕಾಲದಲ್ಲಿ ಗೋಸಾಸ ಕಂಡುಬರುವ ಸ್ಥಳಗಳಲ್ಲಿ ಕಾಣಬರುತ್ತವೆ.

ಇವೂ ಕೂಡ ವಿಶಿಷ್ಟ ರೀತಿ ಕಲ್ಲುಗಳಾಗಿವೆ.

**ನಾಗಗೋಸಾಸ**

ನಾಗರಕಲ್ಲೊಂದರ ಮೇಲಿನ ಶಾಸನದಲ್ಲಿ ಈ ಹೆಸರು ಬಂದಿದೆ. ಬಹುಶಃ ನಾಗರಕಲ್ಲಿನ ಪ್ರತಿಷ್ಠೆಯನ್ನು ಶಾಸನಕಾರ 'ನಾಗಗೋಸಾಸ' ಎಂದು ಕರೆದಿರಬಹುದು. ಹೂವಿನಹಡಗಲಿಯಲ್ಲಿ ಈ ಶಾಸನ ಕಂಡುಬಂದಿದೆ.